ಸಾಕ್ಷಿಯನ್ನು ದಿಃ07.08.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ವಾದಿಯು ಮದುವೆಯ ಕಾಲಕ್ಕೆ ರೂ.5 ಲಕ್ಷ ನಗದು ಹಾಗೂ 80 ಗ್ರಾಂ ಚಿನ್ನವನ್ನು ಮನೆಯಿಂದ ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ಕಾಣಿಸಲು ದಾಖಲೆಗಳು ಇರುವುದಿಲ್ಲ. ನಾನು ಆದರಿಸಿದ ಪಂಚಾಯಿತಿ ಪಾಲು ಪರೀಕತ್ತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಸ್ವತಃ ಮುಂದುವರೆದು ಸದರಿ ಪಂಚಾಯಿತಿ ಪಾಲು ಪರೀಕತ್ತು ನನ್ನ ದೊಡ್ಡಪ್ಪನಾದ 1 ನೇ ಪ್ರತಿವಾದಿಯ ಬಳಿಯಿದ್ದು ಅವರು ಅದನ್ನು ನಮಗೆ ಕೊಟ್ಟಿರುವುದಿಲ್ಲ ಮತ್ತು ವಾದಿಯನ್ನು ಎತ್ತಿ ಕಟ್ಟಿ ಈ ದಾವೆಯನ್ನು ಅವರೇ ಹಾಕಿಸಿರೂತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ.

2. ದಾವಾ ಶೆಡ್ಯೂಲ್ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ದಾವಾ ಶೆಡ್ಯೂಲ್ ಆಸ್ತಿಗಳಲ್ಲಿ ವಾದಿಗೆ ಯಾವುದೇ ಹಿಸ್ಸೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. 1995 ನೇ ಸಾಲಿನಲ್ಲಿ ನನ್ನ ತಾತ ಮೃತರಾದ ಕಾಲಕ್ಕೆ ವಿಭಾಗ ಆಗಿರುತ್ತದೆ ಆದರೆ ನಿಖರವಾದ ದಿನಾಂಕ ಮತ್ತು ತಿಂಗಳು ಗೊತ್ತಿರುವುದಿಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ ಪಾಲನ್ನು ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ನಮ್ಮ ಕುಟುಂಬದಲ್ಲಿ ಪಂಚಾಯಿತಿ ಪಾಲು ಪರೀಕತ್ತು ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಾದಿಯು ಆಕೆಯ ಮದುವೆ ಕಾಲಕ್ಕೆ ರೂ.5 ಲಕ್ಷ ನಗದು ಮತ್ತು 80 ಗ್ರಾಂ ಚಿನ್ನವನ್ನು ಮನೆಯಿಂದ ಪಡೆದುಕೊಂಡು ಹೋಗಿರುತ್ತಾಳೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ಸ್ವಾಧೀನಾನುಭವಕ್ಕೆ 1 ಮತ್ತು 2 ನೇ ಪ್ರತಿವಾದಿಯರು ತೊಂದರೆ ಕೊಡುತ್ತಿದ್ದಾರೆ ಎನ್ನುವ ಕುರಿತು ಪೊಲೀಸ್ ಠಾಣೆಗೆ ದೂರು ದಾಖಲಿಸಿರುವ ಕುರಿತು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ.

5. 1 ಮತ್ತು 2 ನೇ ಪ್ರತಿವಾದಿಯರು ಹಾಗೂ 3 ನೇ ಪ್ರತಿವಾದಿಯ ಗಂಡ ಮತ್ತು 4 ಮತ್ತು 5 ನೇ ಪ್ರತಿವಾದಿಗಳ ತಂದೆ ಜಮೀನನ್ನು ಭಾಗ ಮಾಡಿಕೊಂಡಿರುತ್ತಾರೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ